**(ದಿಃ15.10.2025 ರ ಮಧ್ಯಂತರ ಅರ್ಜಿ ಸಂಖ್ಯೆ 16 ಮತ್ತು 17 ರ ಮೇಲೆ ಆದ ಆದೇಶದ ಅನ್ವಯ)**

**ಸಾಕ್ಷಿಗೆ ದಿನಾಂಕಃ04-11-2025 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಮುಂದುವರೆದ ಪಾಟೀ ಸವಾಲು :: ಪ್ರತಿವಾದಿ ಪರ ಶ್ರೀ. SNR ವಕೀಲರಿಂದ ::**

ದಾವಾ ಶೆಡ್ಯೂಲ್ ಸ್ವತ್ತಿನಲ್ಲಿ ನಾನು ಉತ್ತರದಿಂದ ದಕ್ಷಿಣದ ಅಳತೆ 105 + 103 ಅಡಿ ಎಂದು ನಮೂದಿಸಿದ್ದು ಅದರಲ್ಲಿ ಪ್ರತ್ಯೇಕವಾಗಿ 103 ಅಡಿ ಉತ್ತರಕ್ಕೆ ಇದ್ದು 105 ಅಡಿ ದಕ್ಷಿಣಕ್ಕೆ ಇರುತ್ತದೆ. ಸಾಕ್ಷಿಯು ಮುಂದುವರೆದು 103 ಅಡಿ ವಿಸ್ತೀರ್ಣವು 1 ನೇ ಪ್ರತಿವಾದಿಯ ಜಾಗದ ಕಡೆ ಬರುತ್ತದೆ ಮತ್ತು 105 ಅಡಿ ವಿಸ್ತೀರ್ಣವು ರಾಜೇಂದ್ರ ಎನ್ನುವವರ ಕಡೆ ಬರುತ್ತದೆ ಎಂದು ನುಡಿದಿರುತ್ತಾರೆ.

ದಾವಾ ಶೆಡ್ಯೂಲ್ ಸ್ವತ್ತು ನಾನು ತೋರಿಸಿರುವ ವಿಸ್ತೀರ್ಣದಲ್ಲಿ ಇತ್ತು ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಅವುಗಳನ್ನು ನನ್ನ ವಕೀಲರಿಗೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ದಾವೆಯಲ್ಲಿ ದಾವಾ ಸ್ವತ್ತು ಮೂಲತಃ ಯಾರಿಗೆ ಸೇರಿರುತ್ತದೆ ಮತ್ತು ಅದು ನನ್ನವರೆಗೂ ಯಾವ ರೀತಿ ಬಂದಿರುತ್ತದೆ ಎಂದು ತಿಳಿಸಿರುತ್ತೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ತಿಳಿಸಿರಬಹುದು ಎಂದು ನುಡಿದಿರುತ್ತಾರೆ. ದಾವಾ ಶೆಡ್ಯೂಲ್ ಸ್ವತ್ತನ್ನು ನಾನು ಯಾವ ಸಾಲಿನಲ್ಲಿ ಖರಿದಿ ಮಾಡಿರುತ್ತೇನೆ ಎಂದು ತಿಳಿಸಿರುವುದಿಲ್ಲ ಎಂದರೆ ಸಾಕ್ಷಿಯು ಅದನ್ನು ನನ್ನ ವಕೀಲರಿಗೆ ಕೇಳಬೇಕು ಎಂದು ನುಡಿದಿರುತ್ತಾರೆ. ದಾವಾ ಶೆಡ್ಯೂಲ್ ಸ್ವತ್ತಿನಲ್ಲಿ 2 ಸ್ವತ್ತುಗಳು ಇರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸ್ವತಃ ಅದರಲ್ಲಿ ಒಂದು ಸ್ವತ್ತು ರಿಯಾಜ್ ರವರಿಂದ ಖರೀದಿ ಮಾಡಿದ್ದು ಮತ್ತೊಂದು ಸ್ವತ್ತನ್ನು ಮಲ್ಲೇಖಾ ಖಾನಂ ರವರಿಂದ ಖರೀದಿ ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ. ಸದರಿ ಇಬ್ಬರ ಸ್ವತ್ತು ಮೊದಲು ಬೇರೆ ಬೇರೆ ವಿಸ್ತೀರ್ಣದ ಸ್ವತ್ತುಗಳು ಎಂದರೆ ಸರಿ. ಸದರಿ ಎರಡು ಸ್ವತ್ತುಗಳು ಪ್ರತ್ಯೇಕ ವಿಸ್ತೀರ್ಣ ನನ್ನ ವಾದ ಪತ್ರದಲ್ಲಿ ತಿಳಿಸಿರುತ್ತೇನೆ. ನನ್ನ ವಾದ ಪತ್ರದಲ್ಲಿ ಸದರಿ ಎರಡು ಸ್ವತ್ತುಗಳ ಪ್ರತ್ಯೇಕ ವಿಸ್ತೀರ್ಣ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ಆ ರೀತಿ ತಿಳಿಸದಿದ್ದರೂ ದುರುದ್ದೇಶದಿಂದ

ತಿಳಿಸಿರುತ್ತೇನೆ ಎಂದು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ನನ್ನ ಸ್ವತ್ತಿನಲ್ಲಿ ಮೂರು ಅಡಿ ವಿಸ್ತೀರ್ಣದ ಓಣಿ ಇರುತ್ತದೆ ಎಂದು ತಿಳಿಸಿರುತ್ತೇನೆ ಎಂದರೆ ಸರಿ. ಸದರಿ 3 ಅಡಿ ವಿಸ್ತೀರ್ಣದ ಓಣಿ ನಾನು ಖರೀದಿಸಿರುವ ಸೈಯದ್ ರಿಯಾಜ್ ಹಾಗೂ ಮಲ್ಲೇಖಾ ಖಾನಂ ರವರ ಜಾಗಳ ಮಧ್ಯದಲ್ಲಿ ಇರುತ್ತದೆ. ಸೈಯದ್ ರಿಯಾಜ್ ರವರ ಸ್ವತ್ತು ಉತ್ತರಕ್ಕೆ ಮತ್ತು ಮಲ್ಲೇಖಾ ಖಾನಂ ರವರ ಸ್ವತ್ತು ದಕ್ಷಿಣಕ್ಕೆ ಬರುತ್ತದೆ. ಸದರಿ ವಿಚಾರಗಳನ್ನು ನಾನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ತಿಳಿಸುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಪಿ1 ರಲ್ಲಿ ಸದರಿ ವ್ಯಕ್ತಿಗಳ ಜಾಗದ ಮಧ್ಯದಲ್ಲಿ ಓಣಿ ಇರುತ್ತದೆ ಎಂದು ನಮೂದು ಕಂಡು ಬರುತ್ತದೆ. ನಿಪಿ1 ರಂತೆ ನಾನು ರಿಯಾಜ್ ರವರಿಂದ ಖರೀದಿಸಿದ ಸ್ವತ್ತು 20 x 57 ಅಡಿ ಮತ್ತು 20 x 06 ಅಡಿ ಮತ್ತು 20 x 40 ಅಡಿಗಳ ಜಾಗ ಆಗಿರುತ್ತದೆ ಎಂದರೆ ಸರಿ. ಸದರಿ ರಿಯಾಜ್ ರವರ ಬಳಿ ಅಷ್ಟು ವಿಸ್ತೀರ್ಣದ ಆಸ್ತಿ ಇತ್ತು ಎಂದು ತೋರಿಸಲು ಯಾವುದಾದರು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂದರೆ ಅದನ್ನು ನನ್ನ ವಕೀಲರಿಗೆ ಕೇಳಬೇಕು ಎಂದು ನುಡಿದಿರುತ್ತಾರೆ.

ನಿಪಿ1 ರಲ್ಲಿ ಸೈಯದ್ ರಿಯಾಜ್ ಹಾಗೂ ಮಲ್ಲೇಖಾ ಖಾನಂ ರವರ ಜಾಗಳ ಮಧ್ಯದಲ್ಲಿ 3 ಅಡಿ ಓಣಿ ಜಾಗ ಇರುತ್ತದೆ ಎಂದು ಎಲ್ಲೂ ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಇಬ್ಬರ ಸ್ವತ್ತಿನ ಚೆಕ್ಕುಬಂದಿ ಬೇರೆಯಾಗಿರುತ್ತದೆ ಎಂದರೆ ಸರಿಯಲ್ಲ. 20 x 103 ಅಡಿ ವಿಸ್ತೀರ್ಣದ ಚೆಕ್ಕುಬಂದಿ ನನಗೆ ನೆನಪಿಲ್ಲ. ಅದೇ ರೀತಿ ಮಲ್ಲೇಖಾ ಖಾನಂ ರವರ ಜಾಗದ ಚೆಕ್ಕುಬಂದಿ ತೋರಿಸಲು ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ1 ರ ಪ್ರಕಾರ ನಾನು ಹೇಳುತ್ತಿರುವ 3 ಅಡಿ ಓಣಿಯು ರಾಜೇಂದ್ರ ರವರ ಜಾಗದ ಕಡೆ ಬರುತ್ತದೆ ಎಂದರೆ ಸರಿಯಲ್ಲ.

ನನ್ನ ಪ್ರಕಾರ 20 ಅಡಿಯ ಮತ್ತು 11 ಅಡಿಯ ಎರಡು ಪ್ರತ್ಯೇಕ ಸ್ವತ್ತುಗಳು ಇರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು 3 ಅಡಿಯ ಓಣಿ ಸಹ ಇರುತ್ತದೆ ಎಂದು ನುಡಿಯುತ್ತಾರೆ.

**(ಮುಂದುವರಿದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

sd/-

ಪ್ರಧಾನ ಸಿ.ಜೆ ಮತ್ತು ಹೆ. ಜೆ.ಎಂ.ಎಫ್.ಸಿ

ತರೀಕೆರೆ.

ಸಾಕ್ಷಿಯ ಸಹಿ: